ಕೆ.ಇ.ಬಿ.ಯವರಿಂದ ಗೊತುಗುರಿ ಇಲ್ಲದ ಬಿಲ್‌ಗಳು

೧೪೦. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ) —ಮಾನ್ಯ ಭಾರಿ ಮಂತ್ರಿ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯದ್ವಾತದ್ವಾ ಬಿಲ್ ಮಾಡುತ್ತಿರುವುದರಿಂದ ಗ್ರಾಹಕರಿಗೆ ಆನಗತ್ಯ ತೊಂದರೆ ಆಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಆ) ಹಾಗಿದಲ್ಲಿ ಯದ್ವಾತದ್ವಾ ಬಿಲ್ಲುಗಳಿಗನ ತಪ್ಪುಗಳನ್ನು ತಪ್ಪಿಸಲು ಗಣಕ ಯಂತ್ರದ ಬಿಲ್ಲುಗಳನ್ನು ನೀಡುವ ವ್ಯವಸ್ಥೆ ಮಾಡುವುದನ್ನು ಸರ್ಕಾರ ಜಾರಿಗೆ ತರುವುದೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುಚ್ಛಕ್ತಿ ರಾಜ್ಯ ಸಚಿವರು).—

ಅ) ಕೆಲವುಸಲ ಬಿಲ್ಲುಗಳಲ್ಲಿ ನ್ಯೂನತೆಯಿರುವ ವಿಷಯು ಗಮನಕ್ಕೆ ಬಂದಿದೆ.

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಗಣಕ ಯಂತ್ರದ ಬಿಲ್ಲುಗಳನ್ನು ನೀಡುವ ವ್ಯವಸ್ಥೆ ಜಾರಿಗೆ ತರುವ ಉದ್ದೇಶವಿಲ್ಲ.

ರಾಜ್ಯದಲ್ಲಿರುವ ಅಕೇಶಿಯ ಜಾತಿಯ ಮರಗಳು

೪೮೬. ಶ್ರೀ ಆರ್ ಎನ್. ನಾಯಕ್, (ಭಟ್ಕಳ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಷ್ಟು ಎಕರೆ ಪ್ರದೇಶಗಳಲ್ಲಿ ಅಕೇಶಿಯಾ ಜಾತಿಯ ಗಿಡಗಳನ್ನು ಬೆಳೆಸಲಾಗಿದೆ ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಅಕೇಶಿಯಾ ಗಿಡ ಬೆಳೆಸಲಾಗಿದೆ ?

ಶ್ರೀ ಜಿ.ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಬೆಳೆಸಿದ ೩೯,೦೦೦ ಹೆ. ಮಿಶ್ರಿತ ನೆಡು ತೋಪುಗಳಲ್ಲಿ ಅಕೇಶಿಯಾ ಜಾತಿಯ ಮರಗಳನ್ನು ಬೆಳೆಸಲಾಗುತ್ತಿದೆ.

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆಳೆಸಿದ ೭೦೦೦ ಹೆ. ಮಿಶ್ರಿತ ನೆಡು ತೋಪುಗಳಲ್ಲಿ ಇತರ ಜಾತಿ ಮರಗಳ ಜೊತೆ ಅಕೇಶಿಯಾ ಜಾತಿಯ ಮರಗಳನ್ನೂ ಬೆಳೆಸಲಾಗುತ್ತಿದೆ.

ವಿಶ್ವೇಶ್ವರಯ್ಯ ಕಬ್ಬಿಣ ಮಂತ್ರ ಉಕ್ಕಿನ ಕಾರ್ಖಾನೆಯ ಬಗ್ಗೆ

೬೫೨. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಮೂರಾಟ ಮಾಡಿರುವುದು ನಿಜವೇ? ಹಾಗಿದ್ದಲ್ಲಿ ಯಾರಿಗೆ ಹಾಗೂ ಯಾವ ಷರತ್ತಿನ ಮೇಲೆ;

ಆ) ಸದರಿ ಕಾರ್ಖಾನೆಯು ವಿದ್ಯುಚ್ಛಕ್ತಿ ಬಾಬ್ತು ೭೫ ಕೋಟಿ ರೂಪಾಯಿ ಬಾಕಿ ಇರುವುದು ನಿಜವೇ ;

ಇ) ಇಷ್ಟು ದೊಡ್ಡ ಮೊತ್ತದ ವಿದ್ಯುಚ್ಛಕ್ತಿ ಬಾಕಿ ಇದ್ದಾಗ ಪ್ರತಿ ತಿಂಗಳ ಬಿಲ್ಲನ್ನು ಕಟ್ಟಲಾರದೆ ತೊಂದರೆಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ನಿಜವಲ್ಲ. ಆದ್ದರಿಂದ ಯಾರಿಗೆ ಮತ್ತು ಯಾವ ಷರತ್ತಿನ ಮೇಲೆ ಎಂಬ ವಿಷಯವು ಉದ್ಭವಿಸುವುದಿಲ್ಲ.